22

# ಹನ್ನೆರಡು ಜನ ಶಿಷ್ಯರಿಗೆ ಬೋಧನೆ

# (10:24-42)

ತರುವಾಯ, ಆಗ ತಾನೆ ಯೇಸು ಪ್ರವಾದನೆ ಹೇಳಿದ್ದ ಹಾಗೆಯೇ, ಮುಂಬರುವ ಹಿಂಸೆಗೆ ಅಂಜುಬೇಕಾಗಿಲ್ಲವೆಂಬುದಕ್ಕೆ ಕಾರಣಗಳನ್ನು ಕೊಟ್ಟು, ಅಪೊಸ್ತಲರಿಗೆ ಉಪದೇಶಿಸಿದರು. ಯೇಸುವಿನ ಅಪ್ಪಣೆ ಮುಖ್ಯವಾಗಿ ಅಪೊಸ್ತರಿಗೆ ಕೊಡಲ್ಪಟ್ಟಿದ್ದರೂ, 10:24ರಲ್ಲಿ ಒಂದು ಬದಲಾವಣೆಯನ್ನು ಗಮನಿಸುತ್ತೇವೆ. ಇಲ್ಲಿಂದ ಮುಂದೆ ದ್ವಿತೀಯ ಪುರುಷ ("ನೀನು") ಜೊತೆ ಯೇಸು ಅನಿಶ್ಚಿತವಾದ ತೃತೀಯ ಪುರುಷ (ಈ ರೀತಿಯಾಗಿ "ಒಬ್ಬ ಶಿಷ್ಯನು," "ಪ್ರತಿಯೊಬ್ಬ," ಮತ್ತು "ಯಾರಾದರು") ಹೆಚ್ಚಾಗಿ ಉಪಯೋಗಿಸಲು ಪ್ರಾರಂಭಿಸಿದನು. ಇನ್ನೂ ಮುಂದೆ ಹೇಳುವ ವಿಷಯಗಳು ಆತನನ್ನು ಹಿಂಬಾಲಿಸುವ ಪ್ರತಿ ಶಿಷ್ಯರ ಕುರಿತು ಉದ್ದೇಶಿಸಿ ಹೇಳಿ ರುವದೆಂದು ವ್ಯಾಕರಣಕ್ಕೆ ಸಂಬಂಧಿಸಿದ ಈ ಬದಲಾವಣೆ ಅರ್ಥಕೊಡುತ್ತದೆ.

## "ಗುರುವಿಗಿಂತ ಶಿಷ್ಯನು ದೊಡ್ಡವನಲ್ಲ" (10:24, 25)

**24ಗುರುವಿಗಿಂತ ಶಿಷ್ಯನು ದೊಡ್ಡವನಲ್ಲ, ದಣಿಗಿಂತ ಆಳು ದೊಡ್ಡವನಲ್ಲ. 25ಗುರುವಿನಂತೆ ಆಗುವದು ಶಿಷ್ಯನಿಗೆ ಸಾಕು, ದಣಿಯಂತೆ ಆಗುವದು ಆಳಿಗೆ ಸಾಕು. ಅವರು ಮನೆಯ ಯಜಮಾನನಿಗೆ ಬೆಲ್ಜೆಬೂಲನೆಂದು ಹೆಸರಿಟ್ಟ ಮೇಲೆ ಆತನ ಮನೆಯವರನ್ನು ಏನಂದಾರು? ಆದರೂ ಅವರಿಗೆ ಹೆದರಬೇಡಿರಿ.**

**ವಚನ 24.** ಅಪೊಸ್ತಲರು ಮುಂದೆ ಎದುರಿಸುವಂಥ ವಿರೋಧಗಳ ಕುರಿತು ಎಚ್ಚರಿಸಿದ ತರುವಾಯ, ಅವುಗಳಿಂದ ಆಶ್ಚರ್ಯಗೊಳ್ಳಬಾರದೆಂದು, ವಿಶೇಷವಾಗಿ ಆತನು ತಾನೇ ಸ್ವೀಕರಿಸಿರುವ ವಿರೋಧದ ವಿಷಯದಲ್ಲಿ ಅವರಿಗೆ ಯೇಸು ಹೇಳಿದನು. **ಗುರುವಿಗಿಂತ ಶಿಷ್ಯನು ದೊಡ್ಡವನಲ್ಲ, ದಣಿಗಿಂತ ಆಳು ದೊಡ್ಡವನಲ್ಲ** ಎಂಬ ಸತ್ಯವನ್ನು ಸಾಮಾನ್ಯವಾಗಿ ಒಪ್ಪಿಕೊಳ್ಳಲಾಗುತ್ತದೆ. ಒಬ್ಬ ಶಿಷ್ಯನು ತನ್ನ ಗುರುವನ್ನು ಹಿಂಬಾಲಿಸುತ್ತಾನೆ ಮತ್ತು ಕಲಿಯುತ್ತಾನೆ. ಲೂಕನು ಇದೆ ಸನ್ನಿವೇಶವನ್ನು ವ್ಯತ್ಯಾಸವುಳ್ಳ ರೀತಿಯಲ್ಲಿ ಈ ಮಾತಿನ ಮೊದಲ ಸಾಲನ್ನು ದಾಖಲಿಸಿದ್ದಾನೆ ಮತ್ತು ಆತನು ಇದಕ್ಕೆ ಹೀಗೆ ಸೇರಿಸಿ ಹೇಳಿದ್ದಾನೆ, "(ಒಬ್ಬ ಶಿಷ್ಯನು) ಸಂಪೂರ್ಣ ಕಲಿತವನಾದ ತರುವಾಯ (ಆತನು) ತನ್ನ ಗುರುವಿನಂತೆ ಆಗುವನು" (ಲೂಕ 6:40). ತಾನೊಬ್ಬನೆ ಅವರಿಗೆ ಗುರುವಾಗಿದ್ದೇನೆ ಎಂದು ಯೇಸು ಒತ್ತಿ ಹೇಳಿದನು (23:8). ಆತನು ಸಂಕಟ ಅನುಭವಿಸಿದ್ದರಿಂದ, ಅದೇ ರೀತಿಯಾಗಿ ಆತನ ಶಿಷ್ಯರು ಸಂಕಟವನ್ನು ನಿರೀಕ್ಷಿಸುವವರಾಗಿರಬೇಕು (ನೋಡಿರಿ 1 ಪೇತ್ರ 2:21; 4:1).

ತರುವಾಯ, ಯೋಹಾನ 13:16ರಲ್ಲಿ, "ದಣಿಗಿಂತ ಆಳು ದೊಡ್ಡವನಲ್ಲ, ಕಳುಹಿಸಲ್ಪಟ್ಟವನು ಕಳುಹಿಸಿದವನಿಗಿಂತ ದೊಡ್ಡವನಲ್ಲ" ಎಂದು ಯೇಸು ಅವರಿಗೆ ಹೇಳಿದನು. ಆ ವಾಕ್ಯಭಾಗದಲ್ಲಿ, "ಕಳುಹಿಸಲ್ಪಟ್ಟವನು" ಎನ್ನುವದನ್ನು "ಅಪೊಸ್ತಲ"ನೆಂದು ಸಹ ಅನುವಾದಿಸಬಹುದು. ಯೋಹಾನ 15:20ರಲ್ಲಿ ಯೇಸು ಗುಲಾಮನ ವಿಷಯವನ್ನು ಪುನರಾವರ್ತನೆ ಮಾಡಿ, "ಅವರು ನನ್ನನ್ನು ಹಿಂಸೆಪಡಿಸಿದರೆ ನಿಮ್ಮನ್ನು ಸಹ ಹಿಂಸೆಪಡಿಸುವರು; ಅವರು ನನ್ನ ಮಾತನ್ನು ಕೈಕೊಂಡು ನಡೆದರೆ ನಿಮ್ಮ ಮಾತನ್ನು ಸಹ ಕೈಕೊಂಡು ನಡೆಯುವರು" ಎಂದು ಸೇರಿಸಿ ಹೇಳಿದನು. ಇಂಥಹ ಸಂಬಂಧವುಳ್ಳ ಹೇಳಿಕೆಯು ರಬ್ಬಿಯರ ಸಂಪ್ರದಾಯದಲ್ಲಿ ಕಾಣಿಸುತ್ತದೆ: "ಗುಲಾಮನಿಗೆ ತನ್ನ ಗುರುವಿನಂತೆ

ಆಗುವದು ಅವನಿಗೆ ಸಾಕು."[1]

**ವಚನ 25.** ಶಿಷ್ಯನಿಗೆ ಮತ್ತು ಬೋಧಕರ ಮಧ್ಯೆಯಿರುವ ಸಹವಾಸದ ನಿಮಿತ್ತವಾಗಿ, ಇತರರಿಂದ ಇವರಿಬ್ಬರಿಗೂ ಒಂದೇ ವಿಧವಾಗಿ ನಡೆಸಿಕೊಂಡಿರುವಾಗ **ಗುರುವಿನಂತೆ ಆಗುವದು ಶಿಷ್ಯನಿಗೆ ಸಾಕು, ದಣಿಯಂತೆ ಆಗುವದು ಆಳಿಗೆ ಸಾಕು.** ಕ್ರಿಸ್ತನ ಮತ್ತು ಶಿಷ್ಯರ ಹಿಂಸೆಯ ವಿಷಯದಲ್ಲಿ ಇದು ನಿಜವಾದದ್ದಾಗಿದೆ, ಯಾಕೆಂದರೆ ಅವರು ಒಂದೇ ಬಗೆಯಾಗಿ ನಡಿಸಿಕೊಳ್ಳಲ್ಪಟ್ಟರು.

ಯೇಸು ತನ್ನನ್ನು **ಮನೆಯ ಯಜಮಾನನಿಗೆ** ಮತ್ತು ಆತನ ಹಿಂಬಾಲಕರನ್ನು **ಆತನ ಮನೆಯ** ಸದಸ್ಯರುಗಳೆಂದು ಸೂಚಿಸಿದ್ದಾನೆ. ಈ ಭಾಷಾ ಪ್ರಯೋಗವು ಹಿಂದೆ ಆಲೋಚಿಸಿರುವ ಯಜಮಾನ ಮತ್ತು ಗುಲಾಮನ ವಿಷಯಕ್ಕೆ ಸರಿಸಮವಾಗಿದೆ. ಒಬ್ಬ ಯಜಮಾನನು "ಮನೆಗೆ ಯಜಮಾನ" ಆಗಿರುವನು ಮತ್ತು ಆತನ ಗುಲಾಮರು ಆತನ "ಮನೆಯ ಸದಸ್ಯರುಗಳೆಂದು" ಲೆಕ್ಕಕ್ಕೆ ತೆಗೆದುಕೊಳ್ಳುವನು. ಆತನು ಇಲ್ಲಿ ಎಷ್ಟೋ ಹೆಚ್ಚಾಗಿ ಎನ್ನುವ ವಾದ ತೆಗೆದುಕೊಂಡು ಅದನ್ನು ಒತ್ತಿ ಹೇಳಿದ್ದೇನೆಂದರೆ ಆತನು ಅನುಭವಿಸಿರುವ ತಿರಸ್ಕಾರವನ್ನು ಆತನ ಶಿಷ್ಯರು ಇನ್ನು ಹೆಚ್ಚಾಗಿ ತಿರಸ್ಕಾರಕ್ಕೆ ಒಳಗಾಗುವರು ಎಂದು ಹೇಳಿದ್ದಾನೆ. ಆತನ ಟೀಕಾಕಾರರು ಆತನಿಗೆ **ಬೆಲ್ಜೆಬೂಲನೆಂದು** ಕರೆದು ಆರೋಪಿಸಿದರು, ಬೆಲ್ಜೆಬೂಲನು "ದೆವ್ವಗಳನ್ನು ಆಳುವವನಾಗಿದ್ದನು." ಕ್ರಿಸ್ತನ ಸಹವಾಸದಲ್ಲಿರುವವರಿಗೆ ಈ ರೀತಿಯಾಗಿ ಈ ಶಬ್ದವನ್ನು ಉಪಯೋಗಿಸಿರುವಾಗ ಅವರು ಮಾಡುವ ದ್ವೇಷ ಮತ್ತು ಆತನಿಗೆ ಸಂಪೂರ್ಣವಾಗಿ ಮರ್ಯಾದೆ ಕೊಡದಿರುವದನ್ನು ತೋರಿಸುತ್ತದೆ. ಯಜಮಾನನನ್ನು ಈ ಶಿರೋನಾಮದಿಂದ ಕರೆದಿರುವಾಗ, ಆತನಿಗೆ ಸೈತಾನನ ಸಹಾಯದಿಂದ ಇದೆಲ್ಲ ಮಾಡುವನು ಎಂದು ಮಾತಾಡಿಕೊಂಡರೇ (ಮಾರ್ಕ 3:22, 23), ಆತನ ಹಿಂಬಾಲಕರಿಗೆ ಹೇಗೆ ಉಪಚಾರಮಾಡುವರು? Douglas R. A. Hare ರವರು, "ಬೆಲ್ಜೆಬೂಲನನ್ನು 9:34ರ ವಾಕ್ಯಭಾಗದೊಂದಿಗೆ ಸೇರಿಸಿ ಮತ್ತು ಯೇಸುವಿನ ಬಲವಾದ ಕಾರ್ಯಗಳಿಗೆ ನಕರಾತ್ಮಕ ಪ್ರತಿಕ್ರಿಯೆ ಹೇಳಿಕೆಯೊಂದಿಗೆ ಇದು ಕೊಡುತ್ತದೆ, ಮತ್ತು 12:22-32ಕ್ಕೆ ನೋಡುವಂಥದ್ದಾಗಿದೆ, ಅಲ್ಲಿ ಇದರ ವಿಷಯವನ್ನು ಸಂಪೂರ್ಣವಾಗಿ ಪರಿಶೋಧಿಸಲಾಗಿದೆ."[2]

"ಬೆಲ್ಜೆಬೂಲನ" ಹೆಸರಿನ ಸ್ಪಷ್ಟವಾದ ಅರ್ಥವು ವಿವಾದಸ್ಪಾದವಾಗಿದೆ.[3] "ಒಡೆಯ (ಪರಲೋಕದಲ್ಲಿ) ವಾಸ ಮಾಡುವ ಯಜಮಾನ" ಎಂದು ಕೆಲವರು ಅದರ ಅರ್ಥವನ್ನು ನಿರ್ಧರಿಸುತ್ತಾರೆ. ಇದು ನಿಜವಾದರೆ, ಬಹುಶಃ ಯೇಸು ಹೇಳಿರುವ ಮಾತು "ಮನೆಗೆ ಯಜಮಾನನು" (*oikodespotēs*) ಎನ್ನುವ ಶಬ್ದಗಳ ಚಮತ್ಕಾರವಾಗಿದೆ. ಈ ಹೆಸರಿನ ಅರ್ಥ "ಸಗಣಿಯ ಒಡೆಯ" ಎಂದು ಹಲವರು ಹೇಳುತ್ತಾರೆ. ಬೆಲ್ಜೆಬೂಲನಿಗೆ ಸಂಬಂಧಿಸಿದ ಹೆಸರು "ಬೆಲ್ಜೆಬಬ್" ಎಂದರೆ "ನೊಣಗಳ ಒಡೆಯ" ಎಂದರ್ಥ. ಇದು ಮೂಲತಃ ಕಾನಾನ್ಯರ ತಮ್ಮ ಹಳೆಯ ದೇವರ ಹೆಸರಾಗಿದೆ (2 ಅರಸುಗಳು 1:2, 3, 6, 16). ಈ ಹೆಸರುಗಳ ಅರ್ಥವು ಏನೇ ಆಗಿದ್ದರೂ ಸಹ, ಯೆಹೂದ್ಯ ನಾಯಕರು ಯೇಸುವನ್ನು *ಸೈತಾನ*ನೆಂದು ಸೂಚಿಸಿ ಅವರಿಗೆ ಅವಮಾನಮಾಡಿದರು.

## "ಹೆದರ ಬೇಡರಿ" (10:26-31)

**26ಮರೆಯಾಗಿರುವ ಯಾವದೂ ವ್ಯಕ್ತವಾಗದೆ ಇರುವದಿಲ್ಲ; ಹೊರಪಡದ ರಹಸ್ಯವೂ ಇಲ್ಲ. 27ನಾನು ಕತ್ತಲಲ್ಲಿ ನಿಮಗೆ ಹೇಳುವದನ್ನು ನೀವು ಬೆಳಕಿನಲ್ಲಿ ಹೇಳಿರಿ, ಮತ್ತು ಕಿವಿಯಲ್ಲಿ ಕೇಳಿದ್ದನ್ನು ಮಾಳಿಗೆಗಳ ಮೇಲೆ ನಿಂತು ಸಾರಿರಿ. 28ಇದಲ್ಲದ ದೇಹವನ್ನು ಕೊಂದು ಆತ್ಮವನ್ನು ಕೊಲ್ಲಲಾರದವರಿಗೆ ಹೆದರಬೇಡಿರಿ, ಆತ್ಮ ದೇಹ ಎರಡನ್ನೂ ಕೂಡ ನರಕದಲ್ಲಿ ಹಾಕಿ ನಾಶಮಾಡಬಲ್ಲಾತನಿಗೇ ಹೆದರಿರಿ. 29ದುಡ್ಡಿಗೆ ಎರಡು ಗುಬ್ಬಿಗಳನ್ನು ಮಾರುವದುಂಟಲ್ಲಾ; ಆದರೂ ನಿಮ್ಮ ತಂದೆಯ ಚಿತ್ತವಿಲ್ಲದೆ ಒಂದಾದರೂ ನೆಲಕ್ಕೆ ಬೀಳದು. 30ನಿಮ್ಮ ತಲೇ**

**ಕೂದಲುಗಳು ಸಹ ಎಲ್ಲವೂ ಎಣಿಕೆಯಾಗಿವೆ. 31ಆದದರಿಂದ ಹೆದರಬೇಡಿರಿ; ಬಹಳ ಗುಬ್ಬಿಗಳಿಗಿಂತ ನೀವು ಹೆಚ್ಚಿನವರು.**

ಯೇಸು ಅಪೊಸ್ತಲರಿಗೆ ಅವರು ಹಿಂಸೆಗೆ ಒಳಗಾಗುವಾಗ ಹೆದರದಿರಲು ಅವರಿಗೆ ಹಿತಕರವಾದ ಕಾರಣಗಳನ್ನು ಕೊಟ್ಟನು. "ಹೆದರ ಬೇಡಿರಿ" ಎನ್ನುವ ಆಜ್ಞೆ ಈ ವಾಕ್ಯಭಾಗದಲ್ಲಿ ಮೂರು ಸಾರಿ ಕಾಣಿಸುತ್ತದೆ (10:26, 28, 31).

**ವಚನಗಳು 26, 27.** ಯೇಸು ಅವರಿಗೆ **ಭಯಪಡಬೇಡಿರಿ** ಎಂದು ಹೇಳಿದನು ಯಾಕೆಂದರೆ ಹಿಂಸೆಯಿಂದ ಯಾವುದಾದರೂ ಒಂದು ಒಳ್ಳೆಯ ಸಂಗತಿ ಬರುತ್ತದೆ (ನೋಡಿರಿ ಅಪೊಸ್ತಲರ ಕೃತ್ಯಗಳು 8:1-4; ಫಿಲಿಪ್ಪಿ 1:12-14, 19, 20). ಅವರು ಮಾಡಲು ಒಂದು ಕೆಲಸ ಕೊಡಲ್ಪಟ್ಟಿತ್ತು: ಅವರು ದೇವರ ರಾಜ್ಯದ ಸಂದೇಶವನ್ನು ಸಾರಲು. ಅವರು ಎದುರಿಸುವಂತಹ ಹಿಂಸೆ ಏನಾಗಿದ್ದರೂ ಸಹ, ಅವರ ಸೇವೆಯು ನೆರವೇರಬಹುದು. ಹಿಂದೆ **ಮರೆಯಾಗಿದ್ದ** ಅಥವಾ **ಹೊರಪಡದೆ** ಈಗ ಪ್ರಕಟಣೆಗೊಳ್ಳುವಂಥದ್ದಾಗಿದೆ (ನೋಡಿರಿ ಮಾರ್ಕ 4:22; ಲೂಕ 8:17; 12:2, 3).

ಯೇಸು ಅವರಿಗೆ ಗೋಪ್ಯವಾಗಿ ಬೋಧಿಸಿದ್ದನ್ನು, ಅವರು ತಕ್ಷಣದಲ್ಲಿ ಬಹಿರಂಗವಾಗಿ ಹೇಳಲು ಸಾಮರ್ಥ್ಯವುಳ್ಳವರಾದರು: **ನಾನು ಕತ್ತಲಲ್ಲಿ ನಿಮಗೆ ಹೇಳುವದನ್ನು ನೀವು ಬೆಳಕಿನಲ್ಲಿ ಹೇಳಿರಿ, ಮತ್ತು ಕಿವಿಯಲ್ಲಿ ಕೇಳಿದ್ದನ್ನು ಮಾಳಿಗೆಗಳ ಮೇಲೆ ನಿಂತು ಸಾರಿರಿ.** ಆತನ ಪುನರುತ್ಥಾನ ಮತ್ತು ಆರೋಹಣವಾದ ತರುವಾಯ, ಯೇಸು ಪವಿತ್ರಾತ್ಮನನ್ನು ಕಳುಹಿಸಿ ಕೊಡುವಾಗ ಆ ಆತ್ಮನು ಅವರಿಗೆ ಎಲ್ಲಾವನ್ನು ನೆನಪಿಗೆ ತಂದು, ಎಲ್ಲಾ ಸತ್ಯಕ್ಕೆ ಅವರನ್ನು ಸೇರಿಸುವನು (ಯೋಹಾನ 14:26; 16:13, 14; ಅಪೊಸ್ತಲರ ಕೃತ್ಯಗಳು 2:1-4). ಆ ಸಮಯದಲ್ಲಿ, ಅವರು ಬಹಿರಂಗವಾಗಿ ಯೇಸುವನ್ನು "ಕರ್ತನೆಂದು ಮತ್ತು ಕ್ರಿಸ್ತನೆಂದು" ಸಾರುವರು (ಅಪೊಸ್ತಲರ ಕೃತ್ಯಗಳು 2:36).

"ಮಾಳಿಗೆಗಳ ಮೇಲೆ ನಿಂತು ಸಾರಿರಿ" ಎಂಬುವದು "ಬಹಿರಂಗವಾಗಿ ಸಾರಿರಿ" ಎಂಬುದಾಗಿ ಹೇಳುವ ರೂಪಾಂಲಕಾರವಾಗಿದೆ. ಆ ದಿನಗಳಲ್ಲಿ ಒಂದು ಸುದ್ದಿಯನ್ನು ಒಬ್ಬ ವ್ಯಕ್ತಿ ವಿಸ್ತಾರವಾದ ಪ್ರದೇಶ ಮುಟ್ಟಿಸಬೇಕಾಗಿದ್ದರೆ, ಅವನು ಎತ್ತರದ ಬೆಟ್ಟ ಅಥವಾ ಮನೆಗಳ ಮಾಳಿಗೆ ಮೇಲೆ ಹತ್ತಿ ಅಲ್ಲಿಂದ ಕೂಗುತ್ತಿದ್ದನು ಅಲ್ಲಿಂದ ಎಲ್ಲರು ಕೇಳಿಸಿಕೊಳ್ಳಬಹುದಾಗಿತ್ತು. ಅವರು ಎತ್ತರವಾದ ಮಾಳಿಗೆಯನ್ನು ಹತ್ತಿ ಕೊಂಬುಗಳನ್ನು ಊದಿ ಧಾರ್ಮಿಕ ಪವಿತ್ರ ದಿನಗಳ ಪ್ರಾರಂಭವನ್ನು ಪ್ರಕಟಿಸುತ್ತಿದ್ದರು[4] ಎಂದು ಟಾಲ್ಮಂಡ್ ಹೇಳುತ್ತದೆ.

**ವಚನ 28.** ಯೇಸುವಿನ ಹಿಂಬಾಲಕರು ಅವರ ವೈರಗಳಿಗಾಗಿ **ಹೆದರಬೇಡಿರಿ** ಯಾಕೆಂದರೆ ಅವರು ಆತನ ಶಿಷ್ಯರಿಗೆ ಮಿತವಾದ ಹಾನಿ ಮಾಡುವವರಾಗಿದ್ದಾರೆ. **ಅವರು ದೇಹವನ್ನು ಕೊಲ್ಲಬಹುದು, ಆದರೆ ಅವರು ಆತ್ಮವನ್ನು ಕೊಲ್ಲಲು ಆಗುವದಿಲ್ಲ.** "ಆತ್ಮ" (*psuchē*) ಎಂದು ಅರ್ಥಕೊಡುವ ಗ್ರೀಕ್ ಶಬ್ದ ಇದಕ್ಕೆ ಅನುರೂಪವಾದ ಇಬ್ರಿಯ ಶಬ್ದ *nepesh* ಮತ್ತು ಅವುಗಳಿಗೆ, ಜೀವನದ ಉಸಿರು, ಜೀವನದ ತತ್ವ, ಭೂಲೋಕದ ಜೀವಿತ, ಮಾನವನ ಅಂತರಾತ್ಮದ ಜೀವಿತ (ಆಸೆಗಳು ಮತ್ತು ಭಾವನೆಗಳು ಒಳಗೊಂಡಿವೆ), ವ್ಯಕ್ತಿ, ಮತ್ತು ಆತ್ಮ (ಇದು ಭೂಲೋಕದ ಜೀವಿತವನ್ನು ದಾಟಿಹೋಗುತ್ತದೆ)[5] ಎಂಬ ಅನೇಕ ಅರ್ಥಗಳು ಇವೆ. ಈ ಸನ್ನಿವೇಶದಲ್ಲಿ, ಕೊನೆಯ ಅರ್ಥ ಸಹಜವಾಗಿ ಅವಲೋಕನ ಮಾಡುವಂಥದ್ದಾಗಿದೆ. ದೇಹವನ್ನು ಕೊಲ್ಲಬಹುದು, ಆದರೆ ಆತ್ಮವು ಜೀವಿಸುತ್ತದೆ (ನೋಡಿರಿ 11:29; 16:26; ಮಾರ್ಕ 8:36, 37; ಲೂಕ 12:20; ಇಬ್ರಿಯ 6:19; 1 ಪೇತ್ರ 1:9, 22; 2:11; 4:19; ಯಾಕೋಬ 1:21; 5:20). ಕ್ರಿಸ್ತನ ನಂಬಿಕೆಯುಳ್ಳ ಹಿಂಬಾಲಕರು ತಮ್ಮ ದೇಹವನ್ನು ನಷ್ಟ ಪಡಿಸಿಕೊಂಡರೂ, ಅವರು ನಿತ್ಯ ಶಿಕ್ಷೆಯನ್ನು ಅಥವಾ "ಎರಡನೆ ಮರಣ" ಎದುರಿಸುವದಿಲ್ಲ (25:46; ಪ್ರಕಟಣೆ 20:14). ಅವರ ವೈರಿಗಳು, ಅಗೋಚರ ಮತ್ತು ಅಪ್ರಸ್ತುತವಾದ ಮಾನವನ ಆ ಭಾಗವನ್ನು

ಹಾನಿ ಮಾಡಲಾರರು.

ಮನುಷ್ಯನಿಗೆ ಹೆದರುವ ಬದಲಾಗಿ, ಯೇಸು ಅವರಿಗೆ ದೇಹ ಮತ್ತು ಆತ್ಮವನ್ನು ನರಕದಲ್ಲಿ ನಾಶಮಾಡುವವನಿಗೆ ಹೆದರಬೇಕೆಂದು ಹೇಳಿದನು. ಇಲ್ಲಿ ಎರಡು ಬಗೆಯ "ಹೆದರಿಕೆಗಳು" ಭಿನ್ನವಾಗಿವೆ: ಮನುಷ್ಯನ ಹೆದರುವಿಕೆ ಸ್ವಾರ್ಥದ ಹೆದರಿಕೆ, ಆದರೆ ದೇವರಿಗೆ ಭಯಪಡುವದು ಎಲ್ಲಾ ರೀತಿಯಾಗಿ ಆರೋಗ್ಯಕರ ಮತ್ತು ಒಳ್ಳೆಯದು.[6] ದೇವರಿಗೆ ಭಯಪಡುವವರಾಗಿರಬೇಕು ಯಾಕೆಂದರೆ "ಆತನೆ ಉಳಿಸುವದಕ್ಕೂ ಮತ್ತು ನಾಶಮಾಡುವದಕ್ಕೂ ಶಕ್ತನಾಗಿದ್ದಾನೆ" (ಯಾಕೋಬ 4:12).

"ನಾಶನ" (*apollumi*) ಎಂದು ಅರ್ಥಕೊಡುವ ಗ್ರೀಕ್ ಶಬ್ದ ಎಂಬುದಾಗಿ ಇದು ಸರ್ವನಾಶ ಎನ್ನುವ ಅಭಿಪ್ರಾಯ ಹೊಂದಿರುವದಿಲ್ಲ. ಅವರನ್ನು ನರಕದಲ್ಲಿ ದೊಬ್ಬಿದಾಗ ಆತ್ಮ ದೇಹಗಳು ನಾಶವಾಗುತ್ತವೆ. ("ನರಕ" ಈ ವಿಷಯಕ್ಕಾಗಿ 5:22 ಮೇಲಿನ ವ್ಯಾಖ್ಯಾನ ನೋಡಿರಿ.)

**ವಚನಗಳು 29-31.** ಯೇಸುವಿನ ಹಿಂಬಾಲಕರು ಹೆದರಬಾರದು ಯಾಕೆಂದರೆ **ತಂದೆಯಾದ** ದೇವರು ಅವರನ್ನು ಕಾಯ್ದು ಕಾಪಾಡುವನು. **ಗುಬ್ಬಿಗಳು** ಚಿಕ್ಕದಾದ ಸಾಮಾರ್ಥ್ಯವುಳ್ಳವುಗಳು. ಮೊದಲನೆ ಶತಮಾನದಲ್ಲಿ ಅವುಗಳನ್ನು ತಿನ್ನುತ್ತಿದ್ದರು. ಆದರೆ ಬಡವರು ಮಾತ್ರ ತಿನ್ನುತ್ತಿದ್ದರು ಯಾಕೆಂದರೆ ಅವುಗಳಿಗೆ ಬಹಳ ಖರ್ಚು ಮಾಡುವಂಥವುಗಳಾಗಿರಲಿಲ್ಲ. **ದುಡ್ಡಿಗೆ ಎರಡು** ಗುಬ್ಬಿಗಳನ್ನು ಕೊಂಡುಕೊಳ್ಳುತ್ತಿದ್ದರು. ಲೂಕ 12:6ರಲ್ಲಿ ಐದು ಗುಬ್ಬಿಗಳನ್ನು ಎರಡು ದುಡ್ಡಿಗೆ ಮಾರಾಟ ಮಾಡಿದ್ದರು; ಐದನೆಯ ಗುಬ್ಬಿಯನ್ನು ಚೌಕಾಸಿ ಮಾಡಿದ್ದರಿಂದ ಉಚಿತವಾಗಿ ಹಾಕಿದ್ದರು.[7] "ದುಡ್ಡು" (*assarion*) ಎಂದು ಅರ್ಥಕೊಡುವ ಗ್ರೀಕ್ ಶಬ್ದ ಯೇಸುವಿನ ಕಾಲದಲ್ಲಿ ಚಲಾವಣೆಯಲ್ಲಿರುವ ತಾಮ್ರದ ಒಂದು ಚಿಕ್ಕ ನಾಣ್ಯವನ್ನು ಸೂಚಿಸುತ್ತದೆ. ಇದರ ಬೆಲೆ ಹತ್ತರಲ್ಲಿ ಇದು 1/16 ಎಂದು ಹೇಳ ಬಹುದು.[8] ಗುಬ್ಬಿಗಳು ಮನುಷ್ಯನಿಗೆ ಅಪ್ರಧಾನವಾಗಿದ್ದರೂ, ದೇವರಿಗೆ ತಿಳಿಯದೆ ಒಂದೇ ಒಂದು ಪಕ್ಷಿಯು **ನೆಲಕ್ಕೆ ಬೀಳುವದಿಲ್ಲ** ಅಥವಾ ಸಾಯುವದಿಲ್ಲ.

ಈ ಸಂದರ್ಭದಲ್ಲಿ ಯೇಸು ಕೂಡಲೇ ಮಧ್ಯೆ ಪ್ರವೇಶಿಸಿ, **ನಿಮ್ಮ ತಲೆಕೂದಲುಗಳು ಸಹ ಎಣಿಕೆಯಾಗಿವೆ ಅಂದನು.** David Menton ರವರ ಪ್ರಕಾರ, ಒಬ್ಬ ವ್ಯಕ್ತಿಯ ತಲೆಯ ಮೇಲೆ ಸುಮಾರು 100,000 ಕೂದಲುಗಳು ಇರುತ್ತವೆಂದು ಅಂದಾಜಿಸಲಾಗಿದೆ.[9] ಇದು ಹೇಗೆ ಅಂದಾಜಿಸಲಾಗಿದೆ ಎಂದು ನಮಗೆ ಆಶ್ಚರ್ಯವಾಗುತ್ತದೆ! ದೇವರು ಎಲ್ಲವನ್ನು ಪ್ರಾಮುಖ್ಯವಲ್ಲದ ಮತ್ತು ನಮ್ಮ ಜೀವನದಲ್ಲಿ ಕ್ಷುಲ್ಲಕವಾಗಿರುವದನ್ನು ಆತನಿಗೆ ತಿಳಿದಿದೆ ಎನ್ನುವದು ಯೇಸು ಸೂಚಿಸುತ್ತಿದ್ದಾನೆ. ಇತರ ಸನ್ನಿವೇಶದಲ್ಲಿ, ದೇವರು ಕಾಪಾಡುವದನ್ನು "ನಿಮ್ಮದೊಂದು ತಲೆಕೂದಲಾದರೂ ನಾಶವಾಗುವದಿಲ್ಲ" ಎಂಬುದನ್ನು ಹೇಳಿ ವಾಗ್ದಾನ ಮಾಡಿದ್ದಾನೆ (ಲೂಕ 21:18; ನೋಡಿರಿ ಅಪೊಸ್ತಲರ ಕೃತ್ಯಗಳು 27:34).

ಯೇಸು ಸಣ್ಣತನದಿಂದ ಶ್ರೇಷ್ಠತೆಯ ವಾದವನ್ನು ಉಪಯೋಗಿಸಿ ಮಾನವರ ಕುರಿತು ದೇವರ ಚಿಂತೆಯನ್ನು, ವಿಶೇಷವಾಗಿ, ತನ್ನ ಶಿಷ್ಯರ ವಿಷಯದಲ್ಲಿ ಒತ್ತಿ ಹೇಳಿದ್ದಾನೆ (ನೋಡಿರಿ 6:26 ರ ಮೇಲಿನ ವ್ಯಾಖ್ಯಾನ). **ಆದದರಿಂದ ಹೆದರಬೇಡಿರಿ; ಬಹಳ ಗುಬ್ಬಿಗಿಂತ ನೀವು ಹೆಚ್ಚಿನವರು** ಎಂದು ಹೇಳಿ ಈ ವಾದವನ್ನು ಆತನು ಮುಕ್ತಾಯ ಮಾಡಿದ್ದಾನೆ. ಆ ಮಾತು, ತನ್ನ ಜನರು ಯಾವಾಗ ಸಂಕಟಕ್ಕೆ ಒಳಗಾಗುತ್ತಾರೆ (ಮತ್ತು ಸಾಯುವದು ಸಹ) ದೇವರಿಗೆ ಗೊತ್ತಿರುತ್ತದೆ, ಮತ್ತು ಅವರ ಕುರಿತಾಗಿ ದೇವರಿಗೆ ವಿಶೇಷ ಚಿಂತೆ ಇದೆ. ಇದಕ್ಕೆ ಸಂಬಂಧಿಸಿದಂತೆ ಯೆರೂಸಲೇಮಿನ ಟಲ್ಮಾಂಡ್‌ನಲ್ಲಿ ಒಂದು ಹೇಳಿಕೆ ಕಾಣಿಸುತ್ತದೆ: "ಪರಲೋಕದ (ದೇವರ) ಹೊರತಾಗಿ, ಒಂದು ಪಕ್ಷಿಕೂಡ ನಾಶವಾಗುವದಿಲ್ಲ; ಅದಕ್ಕಿಂತಲೂ ಹೆಚ್ಚಾಗಿ ಒಬ್ಬ ಮಾನವ ನಾಶವಾಗುವದಿಲ್ಲ!"[10]

## “ನನ್ನನ್ನು ಒಪ್ಪಿಕೊಳ್ಳುವ ಪ್ರತಿಯೊಬ್ಬನು” (10:32, 33)

**[32]ಹಾಗಾದರೆ ಯಾವನು ಮನುಷ್ಯರ ಮುಂದೆ ತಾನು ಯೇಸುವಿನವೆಂದು ಒಪ್ಪಿಕೊಳ್ಳುವನೋ, ನಾನು ಸಹ ಅವನನ್ನು ನನ್ನವನೆಂದು ಪರಲೋಕದಲ್ಲಿರುವ ನನ್ನ ತಂದೆಯ ಮುಂದೆ ಒಪ್ಪಿಕೊಳ್ಳುವೆನು. [33]ಆದರೆ ಯಾವನು ಮನುಷ್ಯರ ಮುಂದೆ ತಾನು ಯೇಸುವಿನವನಲ್ಲವೆಂದು ಹೇಳುವನೋ ಅವನನ್ನು ನಾನು ಸಹ ಪರಲೋಕದಲ್ಲಿರುವ ನನ್ನ ತಂದೆಯ ಮುಂದೆ ನನ್ನವನಲ್ಲವೆಂದು ಹೇಳುವೆನು.**

**ವಚನ 32.** ಹೆದರಿಕೆ ಇಲ್ಲದವರಾಗಿರ್ರಿ ಎಂದು ಯೇಸು ತನ್ನ ಹಿಂಬಾಲಕರಿಗೆ ಪ್ರೋತ್ಸಾಹಿಸುವದನ್ನು ಮುಂದುವರಿಸಿದನು, **ಮನುಷ್ಯರ ಮುಂದೆ** (ಆತನನ್ನು) **ಒಪ್ಪಿಕೊಳ್ಳುವ** ಪ್ರತಿಯೊಬ್ಬನಿಗೆ ದೊಡ್ಡ ಆಶೀರ್ವಾದ ವಾಗ್ದಾನ ಮಾಡಿದ್ದಾನೆ. “ಒಪ್ಪಿಕೊ” (*homologeō*) ಎಂದು ಅರ್ಥಕೊಡುವ ಗ್ರೀಕ್ ಶಬ್ದ ಪ್ರಕಟಿಸು ಅಥವಾ ಒಪ್ಪಿಕೊ ಎಂದರ್ಥವಾಗಿದೆ. ಇಲ್ಲಿ ಖಚಿತವಾಗಿ ಯೇಸುವಿನ ಕುರಿತು ಒಪ್ಪಿಕೊಳ್ಳುವಿಕೆ ನಿರ್ದಿಷ್ಟವಾಗಿ ವಿವರಿಸಿರುವದಿಲ್ಲ. ಪರ್ವತ ಪ್ರಸಂಗದಲ್ಲಿ “ಕರ್ತನು” ಎಂದು ಹೇಳುವವರ ಕುರಿತಾಗಿ ಯೇಸು ಮಾತಾಡಿದ್ದಾನೆ; ಏನೇ ಆದರೂ, ಸಹ ಅಂಥವರು ನಿರಾಕರಿಸಲ್ಪಡುವರು ಯಾಕೆಂದರೆ ಅವರ ಕಾರ್ಯಗಳು ಅವರ ನಂಬಿಕೆಯುಳ್ಳ ಜೀವಿತದಂತೆ ಇರಲಿಲ್ಲ (7:21-23). ತರುವಾಯ, “ನೀನು ಬರಬೇಕಾಗಿರುವ ಕ್ರಿಸ್ತನು, ಜೀವಸ್ವರೂಪನಾದ ದೇವಕುಮಾರನು” ಎಂದು ಉತ್ತಮ ಒಪ್ಪಿಕೊಳ್ಳುವಿಕೆ ಎಂದು ಕರೆಯಲ್ಪಡುವ ಈ ಮಾತನ್ನು ಪೇತ್ರನು ಹೇಳುವದರಿಂದ ಒಪ್ಪಿಕೊಂಡನು (16:16).

ಆತನ ಶಿಷ್ಯರನ್ನು ಯೆಹೂದ್ಯರ ನ್ಯಾಯಲಯಗಳ ಮುಂದೆ ಹಾಗೆಯೇ ಅನ್ಯ ಅರಸರುಗಳ ಮುಂದೆ ಮತ್ತು ಅನ್ಯ ಅಧಿಪತಿಗಳ ಮುಂದೆ ನ್ಯಾಯವಿಚಾರಣೆಗಾಗಿ ತೆಗೆದುಕೊಂಡು ಬಂದು ನಿಲ್ಲಿಸುತ್ತಿದ್ದರು (10:17, 18). ಇಂಥಹ ಸಂಧಿಸುವಿಕೆಯ ಸಂದರ್ಭಗಳು ಕ್ರಿಸ್ತನನ್ನು ಒಪ್ಪಿಕೊಳ್ಳುವ ಅವಕಾಶಗಳಾಗಿವೆ. ಶಿಷ್ಯರು ಪ್ರತಿಯೊಂದು ಭಯದಿಂದ ಅವರು ಮೇಲೆ ಬಂದು ಹಿಂಸೆಯ ವಿಷಯದಲ್ಲಿ ಅವರು ಒಪ್ಪಿಕೊಳ್ಳುವಿಕೆಯನ್ನು ಕಾಪಾಡಿಕೊಳ್ಳಬೇಕಾಗಿತ್ತು. “ಪೊಂತಿ ಪಿಲಾತನ ಮುಂದೆ ಉತ್ತಮವಾದ ಒಪ್ಪಿಸಿಕೊಳ್ಳುವಿಕೆ ಸ್ವತಃ ಯೇಸು ಒಪ್ಪಿಕೊಂಡಿದ್ದಾನೆ” (1 ತಿಮೋಥೆ 6:16; ನೋಡಿರಿ 27:11) - ಮತ್ತು ಈ ಒಪ್ಪಿಕೊಳ್ಳುವಿಕೆ ಆತನಿಗೆ ಶಿಲುಬೆ ಮರಣವನ್ನು ತಂದುಕೊಟ್ಟಿತು.

ಯೋಹಾನನ ಸುವಾರ್ತೆಯಲ್ಲಿ, ಅನೇಕ ಯೆಹೂದ್ಯರು ಯೇಸುವಿನಲ್ಲಿಟ್ಟಿರುವ ತಮ್ಮ ನಂಬಿಕೆ ಹೇಳಿಕೊಳ್ಳಲು ಹೆದರಿಕೊಂಡರು ಯಾಕೆಂದರೆ ಈಗಾಗಲೆ ಅವರ ನಾಯಕರು “ಯಾವನಾದರು ಆತನನ್ನು ಕ್ರಿಸ್ತನೆಂದು ಒಪ್ಪಿಕೊಂಡರೆ ಅಂಥವರನ್ನು ಯೆಹೂದ್ಯ ಸಭಾಮಂದಿರದಿಂದ ಹೊರಗೆ ಹಾಕಬೇಕೆಂದು ನಿರ್ಣಯ ಮಾಡಿದ್ದರು” (ಯೋಹಾನ 9:22). ಕೆಲವು ಆಡಳಿತಗಾರರು ಸಹ ಯೇಸುವಿನಲ್ಲಿ ನಂಬಿಕೆ ಇಟ್ಟಿದ್ದರು ಆದರೆ ಅವರು ಜನರ ಮುಂದೆ ಒಪ್ಪಿಕೊಳ್ಳಲಿಲ್ಲ, “ಅವರನ್ನು ತಮ್ಮ ಸಭಾಮಂದಿರದಿಂದ ಹೊರಗೆ ಹಾಕುವರು” ಎಂಬ ಭಯ ಅವರಿಗಿತ್ತು (ಯೋಹಾನ 12:42).

ಕ್ರಿಸ್ತನಲ್ಲಿ ಇಟ್ಟಿರುವ ನಂಬಿಕೆಯನ್ನು ಒಬ್ಬನು ಕ್ರೈಸ್ತನಾಗುವ ಮೊದಲೆ ಒಪ್ಪಿಕೊಳ್ಳಬೇಕಾಗುತ್ತದೆ (ರೋಮಾಪುರ 10:9, 10; 1 ತಿಮೋಥೆ 6:12). “ಕ್ರಿಸ್ತನು, ಜೀವಸ್ವರೂಪನಾದ ದೇವರ ಕುಮಾರನು” ಎನ್ನುವದು ಆ ಒಪ್ಪಿಕೊಳ್ಳುವಿಕೆ ಆಗಿದೆ (16:16; ನೋಡಿರಿ ಅಪೊಸ್ತಲರ ಕೃತ್ಯಗಳು 8:37). ಒಪ್ಪಿಕೊಳ್ಳುವದರಿಂದ ಆತನು ಕರ್ತನೆಂದು ಮತ್ತು ಗುರುವೆಂದು ಸೂಚಿಸುತ್ತದೆ. ಒಬ್ಬ ಕ್ರೈಸ್ತನು ತನ್ನ ವಿಶ್ವಾಸದ ವೃತ್ತಿಗಾಗಿ ಹಿಂಸೆ ಹೊಂದಬಹುದು ಮತ್ತು ತನ್ನ ಪ್ರಾಣವನ್ನು ಸಹ ಕಳೆದುಕೊಳ್ಳಬಹುದು. ಏನೇ ಆಗಲಿ, ಯೇಸು - “ದೇವರಿಗೂ ಮನುಷ್ಯರಿಗೂ ಮಧ್ಯಸ್ಥನು ಒಬ್ಬನೇ” (1 ತಿಮೊಥೆ 2:5; NIV) - **ಅವನನ್ನು ... ಪರಲೋಕದಲ್ಲಿರುವ ನನ್ನ ತಂದೆಯ ಮುಂದೆ ಒಪ್ಪಿಕೊಳ್ಳುವೆನು.** ಪರಲೋಕದಲ್ಲಿರುವ ತಂದೆಯ

ಮುಂದೆ ಎನ್ನುವ ಬದಲಾಗಿ ಲೂಕನು "ದೇವದೂತರ ಮುಂದೆ" ಎಂದು ಬರೆದಿರುತ್ತಾನೆ (ಲೂಕ 12:8, 9).

**ವಚನ 33.** ಅದಕ್ಕೆ ವ್ಯತಿರಿಕ್ತವಾಗಿ ಹೇಳುತ್ತಾ, ಯೇಸು ಆತನಿಂದ ದೂರ ಹೋಗುವ ಪ್ರತಿ ಶಿಷ್ಯನಿಗೆ ಎಚ್ಚರಿಸಿದನು: **ಆದರೆ ಯಾವನು ಮನುಷ್ಯರ ಮುಂದೆ ತಾನು ಯೇಸುವಿನವನಲ್ಲವೆಂದು ಹೇಳುವನೋ ಅವನನ್ನು ನಾನು ಸಹ ಪರಲೋಕದಲ್ಲಿರುವ ನನ್ನ ತಂದೆಯ ಮುಂದೆ ನನ್ನವನಲ್ಲವೆಂದು ಹೇಳುವೆನು.** "ನಿರಾಕರಿಸು" (*arneomai*) ಎಂಬ ಕ್ರಿಯಾಪದದ "ತನ್ನದೆಲ್ಲವನ್ನು ತ್ಯಜಿಸು" ಅಥವಾ "ಪರಿತ್ಯಾಗ" ಎಂಬ ಅರ್ಥ ಕೊಡುತ್ತದೆ. ಮೊದಲನೆಯ ದೃಷ್ಟಾಂತದಲ್ಲಿ, ಯೇಸುವನ್ನು ಕರ್ತನೆಂದು ನಿರಾಕರಿಸಿರುವದು ಸೂಚಿಸುತ್ತದೆ. ಪೇತ್ರನು ನಿರಾಕರಿಸಿರುವಿಕೆ ಅದೇ ವಿಧವಾಗಿತ್ತೆಂದು ಸೂಚಿಸಲು ಉಪಯೋಗಿಸಲಾಗಿದೆ (26:70, 72, 74). ಎರಡನೆ ದೃಷ್ಟಾಂತದಲ್ಲಿ, ವೈಯಕ್ತಿಕವಾಗಿ ತನ್ನ ಶಿಷ್ಯರೆಂದು ಹೇಳಲು ಕ್ರಿಸ್ತನು ನಿರಾಕರಿಸುವದನ್ನು ಸೂಚಿಸುತ್ತದೆ (ನೋಡಿರಿ 7:23; 2 ತಿಮೊಥೆ 2:12).

ಕ್ರಿಸ್ತನನು ನಿರಾಕರಿಸಲು ಆದಿ ಕ್ರೈಸ್ತರು ಹೆಚ್ಚಿನ ಒತ್ತಡದಲ್ಲಿ ಇಡುತ್ತಿದ್ದರು. ಉದಾಹರಣೆ ಕ್ರಿ.ಶ. ಎರಡನೆಯ ಶತಮಾನದ ಪ್ರಾರಂಭದಲ್ಲಿ, Pliny the Younger, Pontus/Bythiniaಗೆ ರಾಜ್ಯಪಾಲನಾಗಿದ್ದನು, ರೋಮಾ ಚಕ್ರವರ್ತಿ Trajanಗೆ ತನ್ನನ್ನು ನಿರಾಕರಿಸುವ ಕ್ರೈಸ್ತರಿಗೆ ತಾನು ಏನು ಮಾಡುತ್ತಿದ್ದಾನೆಂಬುದರ ನಿಯಮದ ಬಗ್ಗೆ ಬರೆದನು. ಕ್ರೈಸ್ತರಾಗಿರುವವರು ಎಂದು ಆರೋಪಿಸಲ್ಪಟ್ಟವರಿಗೆ ಎರಡು ಅಥವಾ ಮೂರು ಸಾರಿ ಈತನು ಪ್ರಶ್ನಿಸುವನು. ಅವರಿಗೆ ಕ್ರಿಸ್ತನನ್ನು ನಿರಾಕರಿಸಲು ಅವಕಾಶ ಕೊಡುತ್ತಿದ್ದನು. ತಮ್ಮ ವಿಶ್ವಾಸವನ್ನು ನಿರಾಕರಿಸಿದವರಿಗೆ ಮರಣದಂಡನೆ ಮಾಡಿಸಿದನು. ಏನೇ ಆದರೂ, ಅವರು ರೋಮಾ ದೇಶದ ಪ್ರಜೆಗಳಾಗಿದ್ದರೆ, ಅವರನ್ನು ರೋಮಗೆ ಕಳುಹಿಸುತ್ತಿದ್ದನು, ಕ್ರೈಸ್ತರಾಗಿರಲು ನಿರಾಕರಿಸುವವರು ಕ್ರಿಸ್ತನಿಗೆ ಶಪಿಸಿದ ನಂತರ, ದೇವರುಗಳಿಗೆ ಮೋರೆಯಿಡಬೇಕು, ಮತ್ತು ಚಕ್ರವರ್ತಿಯ ಮೂರ್ತಿಗೆ ದೂಪ ಮತ್ತು ದ್ರಾಕ್ಷಾರಸದೊಂದಿಗೆ ಪ್ರಾರ್ಥಿಸಿದ ನಂತರ ಅವರನ್ನು ಬಿಡುಗಡೆ ಮಾಡುತ್ತಿದ್ದನು.[11]

## "ಸಮಾಧಾನ ತರುವದಕ್ಕೆ ನಾನು ಬರಲಿಲ್ಲ" (10:34-36)

**34ಭೂಲೋಕದ ಮೇಲೆ ಸಮಾಧಾನ ಹುಟ್ಟಿಸುವದಕ್ಕೆ ಬಂದೆನೆಂದು ನೆನಸಬೇಡಿರಿ; ಸಮಾಧಾನವನ್ನು ಹುಟ್ಟಿಸುವದಕ್ಕೆ ನಾನು ಬಂದಿಲ್ಲ, ಖಡ್ಗವನ್ನು ಹಾಕುವದಕ್ಕೆ ಬಂದೆನು.
35ಹೇಗೆಂದರೆ ಮಗನಿಗೂ ತಂದೆಗೂ, ಮಗಳಿಗೂ ತಾಯಿಗೂ, ಸೊಸೆಗೂ ಅತ್ತೆಗೂ ಭೇದ ಹುಟ್ಟಿಸುವದಕ್ಕೆ ಬಂದನು. 36ಹೀಗೆ ಒಬ್ಬ ಮನುಷ್ಯನಿಗೆ ಅವನ ಮನೆಯವರೇ ವೈರಿಗಳಾಗುವರು.**

**ವಚನ 34.** ಯೇಸು ಸಮಾಧಾನದ ಕುರಿತು ಹೇಳುವ ಮಾತು ಲೋಕಕ್ಕೆ ಆತನು ಬರುವ ಉದ್ದೇಶ ವಿರೋಧಾತ್ಮಕ ಭಾವನೆ ಇರುವದು ಕಾಣಿಸುತ್ತದೆ. ಯೆಶಾಯನು, "ಸಮಾಧಾನದ ಪ್ರಭು" ಎಂದು ಕರೆಯುತ್ತಾನೆ ಮತ್ತು ಆತನ ಆಡಳಿತವು ಸಮಾಧಾನ ಮತ್ತು ನ್ಯಾಯದಿಂದ ಕೂಡಿರುತ್ತದೆ ಎಂದು ಹೇಳಿದನು (ಯೆಶಾಯ 9:6, 7). ಆತನ ದೃಢತೆಯನ್ನು ಹೇಗೆ ನಾವು ವಿವರಿಸುತ್ತೇವೆ? **ಸಮಾಧಾನ**ವಿರದ ನಿಮಿತ್ತ ಹೃದಯಗಳು ಕಠಿಣವಾಗುವದನ್ನು ನಾವು ಗಮನಿಸಬೇಕು. ಯೇಸು ಏನು ಹೇಳಿರುವದು ಮತ್ತು ಮಾಡಿರುವದು ಜನರ ಮಧ್ಯದಲ್ಲಿ ವಿಭಾಗವಾಗುವಂತೆ ಮಾಡಿತು; ಆತನಿಗೆ ಅವರ ಪ್ರತಿಕ್ರಿಯೆ ಮುಖಾಂತರ ಈ ವಿಭಾಗವು ಆಯಿತು. ಯೇಸುವನ್ನು ನಿರಾಕರಿಸಿದವರು ಯೇಸುವನ್ನು ಸ್ವೀಕರಿಸಿದವರೊಂದಿಗೆ ಸಮಧಾನದಿಂದ ಇರದೆ ಇರುವದು ಸ್ಪಷ್ಟವಾಗುತ್ತದೆ. **ಖಡ್ಗ** ಎನ್ನುವ ಪ್ರಸ್ತಾಪ "ಹೋರಾಟ" ಅಥವಾ "ವಿಭಾಗವನ್ನು" ಅಲಂಕಾರಿಕವಾಗಿ ಸೂಚಿಸುತ್ತದೆ (ಲೂಕ 12:51). ಯೇಸು

ಸಮಾಧಾನದ ಅರಸನು (ಲೂಕ 2:14; ಎಫೆಸ 2:14-18), ಆದರೆ ಆತನ ಸಮಾಧಾನ ಲೋಕದ ರೀತಿಯಲ್ಲಿರುವ ಸಮಾಧಾನವಲ್ಲ (ಯೋಹಾನ 14:27; ಗಲಾತ್ಯ 5:22).

**ವಚನಗಳು 35, 36.** ಈ ವಚನದಲ್ಲಿ, ಯೇಸು ಮೀಕನ 7:6ನೇ ವಚನವನ್ನು ಉಲ್ಲೇಖಿಸಿದ್ದಾನೆ. ಆತನ ಉದ್ದೇಶ ವಿಭಾಗಿಸುವದು ಆಗಿರಲಿಲ್ಲ ಆದರೆ ಅವರನ್ನು ಒಂದಾಗಿ ಸೇರಿಸುವದೇ ಆಗಿತ್ತು, ಸುವಾರ್ತೆ ಸಾರಿದ್ದರ ಪ್ರತಿಫಲವಾಗಿ ಆಗಾಗ ವಿಭಾಗಗಳಾದವು. ಆತನ ಸಂದೇಶವು ಕುಟುಂಬಗಳನ್ನು ಬೇರ್ಪಡಿಸಿತು ಹೇಗೆಂದರೆ, ಕುಟುಂಬದ ಕೆಲವು ಸದಸ್ಯರುಗಳು ಸಂದೇಶವನ್ನು ಸ್ವೀಕರಿಸಬಹುದು ಮತ್ತು ಕೆಲವರು ಅದನ್ನು ನಿರಾಕರಿಸಬಹುದು. ಈ ಸಂಗತಿ ಯೇಸುವಿನ ಸ್ವಂತ ಕುಟುಂಬದಲ್ಲಿಯೂ ನಿಜವಾಗಿದೆ (ಮಾರ್ಕ 3:20, 21, 31-35; ಯೋಹಾನ 7:1-9). ಒಬ್ಬರು ಆತನ ಬೋಧನೆಗೆ ನಂಬಿಗಸ್ತರಾಗಿರುವದು ಮತ್ತು ಇನ್ನೊಬ್ಬರು ಅಪನಂಬಿಗಸ್ತರಾಗಿರುವಾಗ ಹತ್ತಿರ ಸಹವಾಸಗಳು ಮುರಿದು ಹೋಗುವಂಥವುಗಳಾಗಿವೆ. **ತಂದೆಗೂ** ಮತ್ತು **ತಾಯಿಗೂ** ತಮ್ಮ ಮಕ್ಕಳಿಗೆ ವಿರೋಧವಾಗಬಹುದು. ಅಥವಾ ಮಕ್ಕಳು ತಂದೆ ತಾಯಿಯವರರನ್ನು ಅದರ ಜೊತೆಗೆ ನಂಬಿಕೆಯನ್ನು ನಿರಾಕರಿಸಬಹುದು. ಗಂಡಂದಿರು ಮತ್ತು ಹೆಂಡತಿಯರು ಆತ್ಮೀಯ ಹೋರಾಟದಲ್ಲಿ ಒಬ್ಬರಿಗೊಬ್ಬರು ವಿರೋಧವಾಗಿರಬಹುದು. ಇಂಥಹ ವ್ಯತ್ಯಾಸಗಳು ಎದ್ದೇಳುವಾಗ, ಒಂದೇ ಮನೆಯ ಸದಸ್ಯರುಗಳು ಆಗಾಗ ವೈರಿಗಳಾಗುತ್ತಾರೆ (ನೋಡಿರಿ 10:21ರ ಮೇಲಿನ ವ್ಯಾಖ್ಯಾನ).

## "ಎಲ್ಲರಿಗಿಂತಲೂ ಹೆಚ್ಚಾಗಿ ನನಗೆ ಪ್ರೀತಿಮಾಡಿರಿ" (10:37-39)

**37 ತಂದೆಯ ಮೇಲಾಗಲಿ ತಾಯಿಯ ಮೇಲಾಗಲಿ ನನ್ನ ಮೇಲೆ ಇಡುವದಕ್ಕಿಂತ ಹೆಚ್ಚಾದ ಮಮತೆಯನ್ನಿಡುವವನು ನನಗೆ ಯೋಗ್ಯನಲ್ಲ; ಮಗನ ಮೇಲಾಗಲಿ ಮಗಳ ಮೇಲಾಗಲಿ ನನ್ನ ಮೇಲೆ ಇಡುವದಕ್ಕಿಂತ ಹೆಚ್ಚಾದ ಮಮತೆಯನ್ನಿಡುವವನು ನನಗೆ ಯೋಗ್ಯನಲ್ಲ. 38 ಮತ್ತು ಯಾವನಾದರೂ ತನ್ನ ಶಿಲುಬೆಯನ್ನು ತೆಗೆದುಕೊಂಡು ನನ್ನ ಹಿಂದೆ ಬಂದ ಹೊರತು ನನಗೆ ಯೋಗ್ಯನಲ್ಲ. 39 ತನ್ನ ಪ್ರಾಣವನ್ನು ಕಂಡುಕೊಂಡವನು ಅದನ್ನು ಕಳಕೊಳ್ಳುವನು; ನನ್ನ ನಿಮಿತ್ತವಾಗಿ ತನ್ನ ಪ್ರಾಣವನ್ನು ಕಳಕೊಂಡವನು ಅದನ್ನು ಕಂಡುಕೊಳ್ಳುವನು.**

**ವಚನ 37.** ಯೇಸು ತನ್ನ ಹಿಂಬಾಲಕರಿಗೆ ಅವರ ಕುಟುಂಬ ಸದಸ್ಯರನ್ನು ಪ್ರೀತಿಸುವದಕ್ಕಿಂತ ಹೆಚ್ಚಾಗಿ ಆತನನ್ನು ಪ್ರೀತಿಸಲು ಸವಾಲನ್ನು ಹಾಕುತ್ತಾನೆ. ತನ್ನ ಶಿಷ್ಯನಾಗಿರಲು "ಯಾವನಾದರೂ ನನ್ನ ಬಳಿಗೆ ಬಂದು ತನ್ನ ತಂದೆ ತಾಯಿ ಹೆಂಡತಿ ಮಕ್ಕಳನ್ನು ಅಣ್ಣತಮ್ಮಂದಿರು ಅಕ್ಕತಂಗಿಯರನ್ನು" ಹಗೆ ಮಾಡಬೇಕೆಂದು ಲೂಕ 14:26ರಲ್ಲಿ ಹೇಳಿದ್ದಾನೆ. ಆತನ ಶಿಷ್ಯನಾಗಿರಬೇಕಾದರೆ, ತನ್ನ ಸ್ವಂತ ಕುಟುಂಬದ ಸದಸ್ಯರುಗಳು, ಅವರು ಈ ವ್ಯಕ್ತಿಗೂ ಮತ್ತು ಕರ್ತನ ಮಧ್ಯದಲ್ಲಿ ಬರಬಹುದು. ಮತ್ತಾಯ 10:37ನೇ ವಚನ ಲೂಕ 14:26ರ ಅರ್ಥ ವಿವರಿಸುತ್ತದೆ. "ಹಗೆ" ಮಾಡಿರಿ ಎಂದು ಯೇಸು ಆಜ್ಞೆ ಮಾಡಿದು, "ಕಡಿಮೆ ಪ್ರೀತಿ ಮಾಡಿರಿ" ಸ್ಪಷ್ಟವಾದ ಅರ್ಥವಾಗಿದೆ (ನೋಡಿರಿ ಆದಿಕಾಂಡ 29:31; KJV). ಆತನ ಶಿಷ್ಯರು ಯಾರನ್ನು ಸಹ ಹಗೆ ಮಾಡಬಾರದು ಎಂಬುದು ಕ್ರಿಸ್ತನ ಆಲೋಚನೆಯಾಗಿತ್ತು, ಆದರೆ ಅವರ ರಾಜನಿಷ್ಟೆ ಇತರರಿಗೆ ಎರಡನೆ ಪ್ರಾತಿನಿಧ್ಯವಾಗಿದ್ದು ಅವರ ಸಮರ್ಪಣೆ ಆತನಿಗೆ ಇರಬೇಕು. ಇದು ಇಲ್ಲದೆ ಹೋದರೆ, ಅವರು ಆತನ ಶಿಷ್ಯರೆಂದು ಕರೆಯಿಸಿಕೊಳ್ಳಲು ಯೋಗ್ಯರಾಗುವದಿಲ್ಲ.

**ವಚನ 38. ಯಾವನಾದರೂ ತನ್ನ ಶಿಲುಬೆಯನ್ನು ತೆಗೆದುಕೊಂಡು ನನ್ನ ಹಿಂದೆ ಬಂದ ಹೊರತು ನನಗೆ ಯೋಗ್ಯನಲ್ಲ.** ತನ್ನ ಅಪೊಸ್ತಲರಿಗೆ ಈ ರೀತಿಯಾಗಿ ಹೇಳುತ್ತಾ, ಇನ್ನೊಂದು ಸವಾಲನ್ನು ಇಟ್ಟಿದ್ದಾನೆ. ಸುವಾರ್ತೆಗಳಲ್ಲಿ ಶಿಲುಬೆ ಎನ್ನುವದನ್ನು ಇಲ್ಲಿ ಮೊದಲನೆಯ ಸಾರಿ ಸೂಚಿಸಲಾಗಿದೆ (ನೋಡಿರಿ 16:24; ಮಾರ್ಕ 8:34; ಲೂಕ 9:23). ಈ ಕಲ್ಪನೆಯು

ರೋಮ ಅವರ ಅಭ್ಯಾಸದಿಂದ ಬಂದಿರುವಂಥದ್ದಾಗಿದೆ ಖಂಡಿಸಲ್ಪಟ್ಟಿರುವ ಅಪರಾಧಿಗೆ ತನ್ನ ಶಿಲುಬೆಯನ್ನು ತಾನೇ ಹೊತ್ತುಕೊಂಡು ಕ್ರೂಜೆಗೆ ಹಾಕುವ ಸ್ಥಳಕ್ಕೆ ಹೋಗುವಂತೆ ಒತ್ತಾಯ ಮಾಡುತ್ತಿದ್ದರು.[12] ಸಂಕಟ, ಅವಮಾನ, ಅಂತಿಮವಾಗಿ ಮರಣಹೊಂದುವದೇ ಆ ಶಿಲುಬೆಯ ಗುರುತಾಗಿತ್ತು. ಇಲ್ಲಿ ತೋರಿಸಿರುವ ಬಾರವು ಯೇಸುವಿನ ಶಿಷ್ಯರು ಸಹಿಸಿಕೊಳ್ಳಲೇಬೇಕಾಗಿತ್ತು, ಕರ್ತನಿಗೆ ನಂಬಿಗಸ್ತರಾಗಿರುವದಕ್ಕಾಗಿ ಅವರು ಯಾವುದೇ ತ್ಯಾಗ ಅವಶ್ಯವಾಗಿ ಮಾಡಲೇ ಬೇಕಾಗಿತ್ತು. ಶಿಲುಬೆ ಹೊರುವದು ಕೆಲವು ಸಾರಿ ತಮ್ಮ ಜೀವವನ್ನೇ ಬಿಟ್ಟು ಬಿಡಬೇಕಾಗಿತ್ತು. ಒಬ್ಬನು ಶಿಲುಬೆ ಹೊರುವದರ ಕುರಿತ ಆಲೋಚನೆಗೆ ಲೂಕನು ಇದು ನಿರಂತರವಾದ ಚಟುವಟಿಕೆಯೆಂದು ಸೂಚಿಸುವ "ದಿನಾಲು" ಎಂಬ ಒಂದು ಶಬ್ದವನ್ನು ಸೇರಿಸಿ ಹೇಳಿದ್ದಾನೆ (ಲೂಕ 9:23). ಒಬ್ಬನು ತನ್ನ ಶಿಲುಬೆ ತಾನು ಹೊತ್ತುಕೊಂಡು ಹೊಗಲು ಸೋತುಹೋದರೆ ಅಂಥವನನ್ನು ತನ್ನ ಶಿಲುಬೆಯನ್ನು ತಾನೇ ಹೊತ್ತುಕೊಂಡು ಗೋಲ್ಗಾಥಕ್ಕೆ ಹೋಗಿರುವಾತನಿಗೆ ಶಿಷ್ಯನಾಗಿರಲು ಯೋಗ್ಯನಲ್ಲ (ಯೋಹಾನ 19:17).

**ವಚನ 39.** ಮುಂದೆ, **ತನ್ನ ಪ್ರಾಣವನ್ನು ಕಂಡುಕೊಂಡವನು ಅದನ್ನು ಕಳಕೊಳ್ಳುವನು; ನನ್ನ ನಿಮಿತ್ತವಾಗಿ ತನ್ನ ಪ್ರಾಣವನ್ನು ಕಳಕೊಂಡವನು ಅದನ್ನು ಕಂಡುಕೊಳ್ಳುವನು** ಎಂದು ಯೇಸು ಹೇಳಿದನು (ನೋಡಿರಿ 16:25; ಮಾರ್ಕ 8:35; ಲೂಕ 9:24; 17:33; ಯೋಹಾನ 12:25). ಒಬ್ಬನು ತನ್ನ ಸ್ವಂತ ಜೀವನ ಕಾಪಾಡಿಕೊಳ್ಳುವವನು ಮತ್ತು ಸ್ವಂತ ತೃಪ್ತಿಗಾಗಿ ಹುಡುಕುವವನು ಆಗಿದ್ದಾನೆ. ಒಬ್ಬನು ತನಗೋಸ್ಕರ ಜೀವಿಸುವದಾದರೆ, ಅವನು ಶಾಶ್ವತವಾಗಿ ದೇವರಿಂದ ಬೇರ್ಪಡುವನು, ಅದುವೆ ಅವನು ತನ್ನ ಪ್ರಾಣವನ್ನು ಕಳೆದುಕೊಳ್ಳುವಂಥದ್ದಾಗಿದೆ. ಅದಕ್ಕೆ ಭಿನ್ನವಾಗಿ, ಒಬ್ಬ ತನ್ನ ಸ್ವಂತ ಇಚ್ಛೆಗಳಿಗೆ ಸಾಯುವವನು - ಅವನು ಹುತಾತ್ಮನಾಗಿ ತನ್ನ ಜೀವವನ್ನೆ ಕೊಡುವನು - ಅಂಥವನು ದೇವರೊಂದಿಗೆ ಯಾವಾಗಲು ಇರುವನು. ಇಚ್ಛೆಯುಳ್ಳವನು ಯಾವುದೇ ತ್ಯಾಗವನ್ನು ಮಾಡಿ ಪರಲೋಕವನ್ನು ಪ್ರವೇಶಿಸಲು ಅದರಲ್ಲಿ ಪಾಲು ತೆಗೆದುಕೊಳ್ಳಲು ನೋಡುವನು. ಏನೇ ಆದರೂ ಎಂಥ ಬೆಲೆಯಾದರೂ ಕೊಟ್ಟು ಯೇಸುವಿಗೆ ನಂಬಗಸ್ತರಾಗಿ ಉಳಿದುಕೊಳ್ಳುವವರು, ಯೇಸುವಿಗಾಗಿ ಕೊನೆಯವರೆಗೆ ಸಹಿಸಿಕೊಳ್ಳುವವನು, ನಿತ್ಯ ಜೀವದ ಮಹಿಮೆಯನ್ನು ಅಂಗಿಕರಿಸಿಕೊಳ್ಳುವರು.[13] James Burton Coffman ರವರು ಈ ಆಲೋಚನೆಯ ಕುರಿತು ಸಾರಾಂಶವನ್ನು ಹೀಗೆ ಹೇಳಿದ್ದಾರೆ,

> ದೇವರ ಚಿತ್ತವನ್ನು ಬೆನ್ನಟ್ಟಿ ಯಾವುದೇ ಸಂಕೋಚವಿಲ್ಲದೆ ತನ್ನ ಪ್ರಾಣವನ್ನು ಅರ್ಪಿಸಿಕೊಳ್ಳುವವನು ... ಈ ವಚನದ ಭಾವನೆಯ ಪ್ರಕಾರ ತನ್ನ ಪ್ರಾಣವನ್ನು ಕಳೆದುಕೊಳ್ಳುವನು. ಒಬ್ಬನು "ಇನ್ನೂ ಜೀವಿಸುವವನು ನಾನಲ್ಲ, ಕ್ರಿಸ್ತನು ನನ್ನಲ್ಲಿ ಜೀವಿಸುತ್ತಾನೆ" ಎಂದು ಪೌಲನೊಂದಿಗೆ ಹೇಳಬೇಕಾದರೆ (ಗಲಾತ್ಯ 2:20), ಅವನು ತನ್ನ ಸ್ವಂತ ಪ್ರಾಣ ಮತ್ತು ಇಷ್ಟವನ್ನು ಕ್ರಿಸ್ತನ ಪ್ರಾಣ ಮತ್ತು ಇಷ್ಟದೊಂದಿಗೆ ಮುಳುಗಿಸಬೇಕು ಅವನು ತನ್ನ ಸ್ವಂತ ಪ್ರಾಣವನ್ನು ಕಳೆದುಕೊಳ್ಳುವವನು, ಮತ್ತು ಅದನ್ನು ಕಂಡುಕೊಳ್ಳುವವನು ಎಂದರ್ಥಕೊಡುತ್ತದೆ.[14]

## "ನಿಮ್ಮನ್ನು ಸೇರಿಸಿಕೊಳ್ಳುವವನು ನನ್ನನ್ನು ಸೇರಿಸಿಕೊಳ್ಳುವವನಾಗಿದ್ದಾನೆ" (10:40-42)

**[40]ನಿಮ್ಮನ್ನು ಸೇರಿಸಿಕೊಳ್ಳುವವನು ನನ್ನನ್ನು ಸೇರಿಸಿಕೊಳ್ಳುವವನಾಗಿದ್ದಾನೆ; ನನ್ನನ್ನು ಸೇರಿಸಿಕೊಳ್ಳುವನನು ನನ್ನನ್ನು ಕಳುಹಿಸಿಕೊಟ್ಟಾತಾನನ್ನೇ ಸೇರಿಸಿಕೊಳ್ಳುವವನಾಗಿದ್ದಾನೆ. [41]ಪ್ರವಾದಿಯನ್ನು ಪ್ರವಾದಿಯೆಂದು ಸೇರಿಸಿಕೊಳ್ಳುವವನು ಪ್ರವಾದಿಗೆ ಬರತಕ್ಕ ಪ್ರತಿಫಲವನ್ನು**

**ಹೊಂದುವನು; ನೀತಿವಂತನನ್ನು ನೀತಿವಂತನೆಂದು ಸೇರಿಸಿಕೊಳ್ಳುವವನು ನೀತಿವಂತನಿಗೆ ಬರತಕ್ಕ ಪ್ರತಿಫಲವನ್ನು ಹೊಂದುವನು. [42]ಮತ್ತು ಈ ಚಿಕ್ಕವರಲ್ಲಿ ಒಬ್ಬನಿಗೆ ಯೇಸುವಿನ ಶಿಷ್ಯನೆಂದು ಯಾವನಾದರೂ ಒಂದು ತಂಬಿಗೆ ತಣ್ಣೀರನ್ನಾದರೂ ಕುಡಿಯುವದಕ್ಕೆ ಕೊಟ್ಟರೆ ಬರತಕ್ಕ ಪ್ರತಿಫಲವು ಅವನಿಗೆ ತಪ್ಪುವದೇ ಇಲ್ಲವೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ ಅಂದನು.**

**ವಚನ 40. ನಿಮ್ಮನ್ನು ಸೇರಿಸಿಕೊಳ್ಳುವವನು ನನ್ನನ್ನು ಸೇರಿಸಿಕೊಳ್ಳುವವನಾಗಿದ್ದಾನೆ** ಎಂದು ಯೇಸು ಅಪೊಸ್ತಲರಿಗೆ ಸೂಚಿಸಿದ್ದಾನೆ. "ಸೇರಿಸಿಕೊಳ್ಳುವದು" ಎಂಬುದರ ಅರ್ಥವು 10:9-15ರ ವಚನಗಳಿಂದ ಸ್ಪಷ್ಟೀಕರಿಸಲಾಗಿದೆ. ಯಾರು ಅಪೊಸ್ತಲರನ್ನು ತಮ್ಮ ಮನೆಗಳಲ್ಲಿ ಸೇರಿಸಿಕೊಂಡು ಅವರಿಗೆ ಉಳಿದುಕೊಳ್ಳಲು ಸ್ಥಳ ಮತ್ತು ಆಹಾರವನ್ನು ಕೊಡುವರೋ ಅದು ಯೇಸುವನ್ನೇ "ಸ್ವೀಕರಿಸಿಕೊಂಡು" ಮಾಡಿದ ಹಾಗೆ ಎನ್ನುವದು ಅರ್ಥವಾಗಿದೆ. ಕ್ರೈಸ್ತರು ಇಂದಿನ ದಿನಗಳಲ್ಲಿ, ಅಪೊಸ್ತಲರಂತೆ ಆತನ ಹೆಸರಿನಲ್ಲಿ ಮತ್ತು ಆತನ ಅಧಿಕಾರದಿಂದ ಪ್ರಪಂಚದಲ್ಲಿ ಮುಂದೆ ಹೋಗುತ್ತಿದ್ದಾರೆ (28:18-20). ಯಾವನಾದರೂ ಸುವಾರ್ತಾ ದೂತನನ್ನು "ಸೇರಿಸಿ ಕೊಂಡರೆ" ಅದರ ಪರಿಣಾಮ, ಯೇಸುವನ್ನೇ ಸೇರಿಸಿಕೊಂಡಂತೆ ಆಗುತ್ತದೆ (ಗಲಾತ್ಯ 4:14). ಅದಕ್ಕೆ ವ್ಯತಿರಿಕ್ತವಾಗಿ, ಆತನ ಶಿಷ್ಯರನ್ನು ಹಿಂಸೆಪಡಿಸಿದರೆ ಅದು ಯೇಸುವನ್ನೇ ಹಿಂಸೆ ಪಡಿಸಿದಂತೆ ಆಗುತ್ತದೆ (ಅಪೊಸ್ತಲರ ಕೃತ್ಯಗಳು 9:1-4). ಒಂದು ರಬ್ಬಿಯರ ಸಂಪ್ರದಾಯ ಹೀಗೆ ಹೇಳುತ್ತದೆ, "ಮನುಷ್ಯನ ಪ್ರತಿನಿಧಿಯು ಸ್ವತಃ ಮನುಷ್ಯನೇ ಆಗಿದ್ದಾನೆ."[15]

**ನನ್ನನ್ನು ಸೇರಿಸಿಕೊಳ್ಳುವವನನು ನನ್ನನ್ನು ಕಳುಹಿಸಿಕೊಟ್ಟಾತಾನನ್ನೇ ಸೇರಿಸಿ ಕೊಳ್ಳುವವನಾಗಿದ್ದಾನೆ** ಎಂದು ಯೇಸು ಅವರಿಗೆ ಜ್ಞಾಪಕಮಾಡಿದನು. ಕ್ರಿಸ್ತನ ಧ್ಯೇಯಕ್ಕೆ ಉತ್ತೇಜನ ಮಾಡುವದರ ಮುಖಾಂತರ ಒಬ್ಬನು ಆತನನ್ನು ಕಳುಹಿಸಿದ ತಂದೆಗೆ ಗೌರವಿಸಿದಂತೆ ಆಗುತ್ತದೆ (ಮಾರ್ಕ 9:37; ಲೂಕ 9:48; ಯೋಹಾನ 13:20).

**ವಚನ 41.** ಯೇಸು, ತನ್ನ ಪ್ರಕಟಣೆಯಲ್ಲಿ ಪ್ರವಾದಿಗಳನ್ನು ಸೇರಿಸಿದ್ದಾನೆ, **ಪ್ರವಾದಿಯನ್ನು ಪ್ರವಾದಿಯೆಂದು ಸೇರಿಸಿಕೊಳ್ಳುವವನು ಪ್ರವಾದಿಗೆ ಬರತಕ್ಕ ಪ್ರತಿಫಲವನ್ನು ಹೊಂದುವನು.** "ಪ್ರವಾದಿಯ ಹೆಸರಿನಲ್ಲಿ" ಎನ್ನುವ ವಾಕ್ಯಭಾಗವು "Hebraismನಲ್ಲಿ 'ಒಬ್ಬ ಪ್ರವಾದಿಯಂತೆ'"[16] ಎಂದರ್ಥ. "ಒಬ್ಬನು ಪ್ರವಾದಿಯಾಗಿದ್ದರಿಂದ ಪ್ರವಾದಿಯನ್ನು ಸೇರಿಸಿ ಕೊಳ್ಳುತ್ತಾರೆ"[17] ಎಂದು William Hendriksen ವಚನ 41ಎ ಯನ್ನು ಅನುವಾದಿಸಿದ್ದಾರೆ. ಆದರೆ ಒಬ್ಬನು ಯಾರಾಗಿದ್ದಾರೊ ಎಂಬ ಆಲೋಚನೆಯಿಂದ ದೇವರ ಸಂದೇಶಕನನ್ನು ಸೇರಿಸಿಕೊಳ್ಳುವವನು, ಆತನೆ ಒಬ್ಬ ಪ್ರವಾದಿಯಾಗಿದ್ದಂತೆ ಪ್ರತಿಫಲಹೊಂದುವನು ಎಂಬ ಅಭಿಪ್ರಾಯ ಈ ಮಾತಿನಲ್ಲಿ ಇರುವದು ಕಾಣಿಸುತ್ತದೆ. ಪ್ರವಾದಿಗಳು ಮತ್ತು ಪ್ರವಾದಿನಿಯರು ಆದಿ ಸಭೆಯಲ್ಲಿ ಇದ್ದರು (ಅಪೊಸ್ತಲರ ಕೃತ್ಯಗಳು 11:27-30; 13:1; 21:9-11; 1 ಕೊರಿಂಥ 12:28; ಎಫೆಸ 2:20; 3:5). ಅದ್ಭುತಗಳ ವರಗಳಲ್ಲಿ ಒಂದಾಗಿರುವ ಪ್ರವಾದನೆಯು ಆದಿ ಕ್ರೈಸ್ತತ್ವದಲ್ಲಿಯೇ ಕೊನೆಗೊಂಡಿದೆ (ನೋಡಿರಿ 1 ಕೊರಿಂಥ 13:8).

ವಚನ 41ಬಿ ನೀತಿವಂತ ಮನುಷ್ಯನಿಗೆ (*dikaios*) ತೋರಿಸುವ ಆತಿಥ್ಯದಿಂದ ಈ **ವ್ಯಕ್ತಿ ಸರಿಸಮವಾದ** ಆಶೀರ್ವಾದಗಳನ್ನು ಹೊಂದುವನೆಂದು ಇದು ಸೂಚಿಸುತ್ತದೆ. ಈ *dikaios* ಎನ್ನುವ ಪದ ಒಬ್ಬನ ಕೇವಲ ನ್ಯಾಯ ಮತ್ತು ಒಳ್ಳೆ ತನವು ಗುರುತಿಸುತ್ತದೆ. ಇಂಥವನು ದೇವರ ನಿಯಮಗಳಿಗೆ ನಿರ್ದಿಷ್ಟವಾಗಿ ತನ್ನ ಜೀವಿತವನ್ನು ಒಪ್ಪಿಸಿಕೊಂಡಿರುತ್ತಾನೆ. "ಪ್ರವಾದಿಗಳು" ಮತ್ತು "ನೀತಿವಂತ ಮನುಷ್ಯರು" ಇವರನ್ನು ಮತ್ತಾಯ (13:17; 23:29)ರಲ್ಲಿ ಒಂದಾಗಿ ಒಟ್ಟಿಗೆ ಸೇರಿಸಿದ್ದಾರೆ. ಈ ಪದಗಳು ಒಂದಕ್ಕೊಂದು ಅವುಗಳ ಪದ ಸಮವಾದ ಅರ್ಥದಲ್ಲಿ ಅದಲು ಬದಲಾಗಿ ಬಳಸಬಹುದಾಗಿದೆ. ನೀತಿವಂತರು ಆತ್ಮನ ಪ್ರೇರಪಣೆ ಹೊಂದದೆ

ಇರುವದರಿಂದ ಪ್ರವಾದಿಗಳಿಂದ ಬೇರ್ಪಡಿಸುವ ಸಾಧ್ಯತೆಯಿದೆ. "ನೀತಿವಂತನು" ಎಂಬ ಪದವನ್ನು ಆದಿ ಸಭೆಯಲ್ಲಿ ಒಬ್ಬ "ಉಪದೇಶಕನಿಗೆ" ಸೂಚಿಸುವ ಸಾಧ್ಯತೆಯು ಕೂಡ ಇದೆ (ನೋಡಿರಿ 1 ಕೊರಿಂಥ 12:29; ಎಫೆಸ 4:11; ಯಾಕೋಬ 3:1).

**ವಚನ 42. ಈ ಚಿಕ್ಕವರಲ್ಲಿ ಒಬ್ಬನಿಗೆ** ಎಂದು ಹೇಳುವ ಭಾಗವು ಬಹುಶಃ ಅಪೊಸ್ತಲರನ್ನು ಸೂಚಿಸುವಂಥದ್ದಾಗಿದೆ (ನೋಡಿರಿ ಮಾರ್ಕ 9:41), ಅಥವಾ ಸಾಮಾನ್ಯವಾಗಿ ಯೇಸುವಿನ ಹಿಂಬಾಲಕರನ್ನು ಗುರುತಿಸುವಂಥದ್ದಾಗಿದೆ (ನೋಡಿರಿ 18:6, 10, 14; ಮಾರ್ಕ 9:42; ಲೂಕ 17:2). ಈ ರೀತಿಯಾಗಿ ವರ್ಣಿಸಿರುವದು ಪ್ರೀತಿಗಳಿಸುವ ಪದವಾಗಿರಬಹುದು. ಯೋಹಾನನು ಸಹ ಆತನು ಬರೆಯುತ್ತಾ ಇರುವ ಎಲ್ಲಾ ಕ್ರೈಸ್ತರನ್ನು ಸೂಚಿಸಿ ಇದಕ್ಕೆ ಸರಿಸಮವಾಗಿರುವ ಹೇಳಿಕೆ, "ಪ್ರಿಯರಾದ ಮಕ್ಕಳೇ" ಎಂದು ವ್ಯಕ್ತಪಡಿಸಿದ್ದಾನೆ (1 ಯೋಹಾನ 2:1, 28; 3:7, 18). ಇನ್ನೊಂದು ರೀತಿಯಾಗಿ, ಲೋಕದ ದೃಷ್ಟಿಯಲ್ಲಿ ಅವರು ಬಲವಿಲ್ಲದವರು ಮತ್ತು ಕ್ಷುಲ್ಲಕವಾಗಿರುವವರನ್ನು "ಈ ನನ್ನ ಸಹೋದರರಲ್ಲಿ ಕೇವಲ ಅಲ್ಪನಾದವನೊಬ್ಬನು" ಎಂಬುದಾಗಿ ಒತ್ತಿ ಹೇಳಿ ವರ್ಣಿಸುವಂಥದ್ದಾಗಿದೆ (25:40; NIV).

**ಒಂದು ತಂಬಿಗೆ ತಣ್ಣೀರನ್ನಾದರೂ ಕುಡಿಯುವದಕ್ಕೆ ಕೊಡುವ** ಬಹಳ ಚಿಕ್ಕದಾದ ಸೇವೆಯು ಗಮನಿಸುವಂಥದ್ದಾಗಿದೆ (25:31-46). ಒಬ್ಬ ವ್ಯಕ್ತಿ ತನ್ನ ಸಹ ವಿಶ್ವಾಸಿಗೆ ವಾಸಸ್ಥಳ ಮತ್ತು ಆಹಾರ ಒದಗಿಸಲು ಆಗದೆ ಇರಬಹುದು; ಆದರೆ ಅವನು ಒಂದು ವೇಳೆ ಚಿಕ್ಕದಾದ ರೀತಿಯಲ್ಲಿ ಸ್ವಲ್ಪ ಕರುಣೆ ತೋರಿದರೆ, **ಪ್ರತಿಫಲವು ಅವನಿಗೆ ತಪ್ಪುವದೇ ಇಲ್ಲ.**

ಯೇಸು ತನ್ನ ಅಪೊಸ್ತಲರಿಗೆ ಮಿತವಾದ ಒಂದು ನಿಯೋಗಕೊಟ್ಟು ಅಪ್ಪಣೆ ಮಾಡಿದ ತರುವಾಯ, ಅವರು ಆತನು ಹೇಳಿದಂತೆ ಮಾಡಲು ಸಿದ್ಧರಾಗಿ ಹೊರಟು ಹೋದರು (ಮಾರ್ಕ 6:12, 13; ಲೂಕ 9:6). **ಅವರು ನಂತರ ಹಿಂದಿರುಗಿ ಬಂದರು** ಮತ್ತು ತಮ್ಮ ಯಶಸ್ವಿಯಾದ ನಿಯೋಗದ ಕುರಿತು ಯೇಸುವಿಗೆ ವರದಿ ಕೊಟ್ಟರು (ಮಾರ್ಕ 6:30; ಲೂಕ 9:10).

## ಪಾಠಗಳು

## ಅಪೊಸ್ತಲರ ಮರಣ (10:28)

ಯೇಸು ತನ್ನ ಅಪೊಸ್ತಲರಿಗೆ "ದೇಹವನ್ನು ಕೊಂದು ಆತ್ಮವನ್ನು ಕೊಲ್ಲಲಾರದವರಿಗೆ ಹೆದರಬೇಡಿರಿ" ಎಂದು ಹೇಳಿದನು (10:28). ಇವರು ಆತನ ಮಾತುಗಳನ್ನು ಅವರ ಹೃದಯಕ್ಕೆ ತೆಗೆದುಕೊಂಡರು; ಎಲ್ಲಾ ಅಪೊಸ್ತಲರು ಹುತಾತ್ಮರಾದರು ಯೋಹಾನನು ಮಾತ್ರ ವಯಸ್ಸಾಗಿ ವೃದ್ಧನಾದ ಮೇಲೆ ತೀರಿಕೊಂಡನು ಎಂದು ಒಂದು ಸಂಪ್ರದಾಯವು ಹೇಳುತ್ತದೆ.[18] ಈ ವಿಷಯಗಳು ಅವರು ಇದ್ದ ಸ್ಥಿತಿಗತಿ ಮತ್ತು ಮರಣ ಹೊಂದಿರುವ ಸ್ಥಿತಿ ನೋಡುವಾಗ ಅದೆಲ್ಲವು ಒಪ್ಪದೆ ಇರಬಹುದು, ಆದರೆ ಅಪೊಸ್ತಲರು ಧೈರ್ಯ ಮತ್ತು ಸಮರ್ಪಣೆ ಎನ್ನುವ ಒಂದು ಮುದ್ರೆಯನ್ನು ಬಿಟ್ಟು ಹೋಗಿದ್ದಾರೆ. ಇವರು ಕಲ್ಲುಗಳಿಂದ ಹೊಡೆಸಿಕೊಂಡರು, ತಲೆಯನ್ನು ಕಡಿದು ಹಾಕಿದರು, ಶಿಲುಬೆಗೆ ಹಾಕಿದರು, ಯಾಕೆಂದರೆ ಅವರು ಕ್ರಿಸ್ತನಿಗೆ ಸಾಕ್ಷಿಗಳಾಗಿದ್ದರು. ಈ ವಿವರಣೆಯು ಸ್ತೆಫನನಿಗೆ ಕಲ್ಲು ಹೊಡೆದಿರುವದು ಮತ್ತು ಯಾಕೋಬನು ಕತ್ತಿಯಿಂದ ಮರಣಹೊಂದಿರುವದು ಒಳಗೊಂಡಿದೆ, ಇವೆಲ್ಲವುಗಳು ಹೊಸ ಒಡಂಬಡಿಕೆಯಲ್ಲಿ ದಾಖಲಾಗಿರುತ್ತವೆ (ಅಪೊಸ್ತಲರ ಕೃತ್ಯಗಳು 7:58; 12:2).

David Stewart

## ಉತ್ತಮವಾದ ಒಪ್ಪಿಕೊಳ್ಳುವಿಕೆ (10:32)

ಒಬ್ಬ ಕ್ರೈಸ್ತನು ತಾನು ದೀಕ್ಷಾಸ್ನಾನದ ಸಮಯದಲ್ಲಿ ಒಪ್ಪಿಕೊಂಡಿರುವ ಒಳ್ಳೆಯ ಮಾತನ್ನು ಕಾಪಾಡಿಕೊಳ್ಳಬೇಕು. ಇದನ್ನು ಆತನು ಪ್ರತಿದಿನದ ಜೀವಿತದ ಮುಖಾಂತರ ಮತ್ತು

ಕ್ರಿಸ್ತನಲ್ಲಿರುವ ಆತನ ನಂಬಿಕೆಯ ಕುರಿತು ಇತರರೊಂದಿಗೆ ಹಂಚಿಕೊಳ್ಳುವದರಿಂದ ಆತನು ಕಾಪಾಡಿಕೊಳ್ಳಬಹುದು. ಪೌಲನು ತಿಮೊಥೆಯನಿಗೆ ಒತ್ತಾಯ ಮಾಡಿ, "ನಂಬಿಕೆಯುಳ್ಳ ಉತ್ತಮವಾದ ಹೋರಾಟಮಾಡು ನಿತ್ಯ ಜೀವವನ್ನು ಹಿಡಿದುಕೋ; ಅದಕ್ಕಾಗಿ ದೇವರು ನಿನ್ನನ್ನು ಕರೆದನು, ಮತ್ತು ನೀನು ಅನೇಕ ಸಾಕ್ಷಿಗಳ ಮುಂದೆ ಒಳ್ಳೇ ಪ್ರತಿಜ್ಞೆಯನ್ನು ಮಾಡು" ಎಂದು ಹೇಳಿದನು (1 ತಿಮೊಥೆ 6:12; NIV). David Stewart

## ನಿನ್ನ ಪ್ರಾಣವನ್ನು ಕಂಡುಕೊಳ್ಳುವದು (10:39)

ಕೆಲವು ಸಾರಿ ನಾವು ಒಬ್ಬ ಯೌವನಸ್ಥನ ಕುರಿತು ಅವನು "ತನ್ನನ್ನು ಕಂಡುಕೊಳ್ಳಲು" ಪ್ರಯತ್ನಿಸುತ್ತಿದ್ದಾನೆ ಎಂಬುದಾಗಿ ಹೇಳುತ್ತೇವೆ. ಅನೇಕ ಜನರು ಅವರು ಪಾಲ್ಗೊಳ್ಳುವ ಆಟಗಳು, ಅಭ್ಯಾಸಗಳು, ಶಿಕ್ಷಣ ಮತ್ತು ಜೀವನೋಪಾಯದ ಕಾರ್ಯಗಳು ಅವುಗಳ ಮುಖಾಂತರ ತಮ್ಮನ್ನು ತಾವೇ ಗುರುತಿಸಿಕೊಳ್ಳಲು ಪ್ರಯತ್ನಿಸುವರು. ಇನ್ನು ಇತರರು ಮಾದಕ ದ್ರವ್ಯಗಳಿಂದ ಪ್ರಯೋಗ ಮಾಡುವದು ಅಥವಾ ಲೈಂಗಿಕ ಕ್ರಿಯೆಗಳಲ್ಲಿ ಸೇರಿಕೊಳ್ಳುವದು ಈ ಕೆಟ್ಟದಾದ ಪ್ರಯತ್ನಗಳಿಂದ ತಮ್ಮನ್ನು ತಾವು ಗುರುತಿಸಿಕೊಳ್ಳಲು ಬೆನ್ನಟ್ಟುವರು. ಕೊನೆಗೆ, ಇವುಗಳಲ್ಲಿ ಯಾವುದು ತೃಪ್ತಿ ಕೊಡುವದಿಲ್ಲ - ಸೊಲೊಮೋನನು ತನ್ನ ಜೀವಿತ ಕಂಡುಕೊಳ್ಳಲು ಕೆಲಸ, ಸಂಪತ್ತು ಮತ್ತು ಸ್ತ್ರೀಯರ ಹಿಂದೆ ಬಿದ್ದನು ಕೊನೆಗೆ ಅತೃಪ್ತಿಯ ಖಾಲಿತನದಿಂದ ಹೊರಗೆ ಬಿದ್ದನು. ಆತನು ಜೀವನದ ಅರ್ಥವನ್ನು ಕೇವಲ ದೇವರೊಂದಿಗೆ ಅನ್ಯೋನ್ಯತೆ ಯಿಂದ ಇರುವದರಿಂದ ಕಂಡುಕೊಳ್ಳಬಹುದು ಎನ್ನುವ ತೀರ್ಮಾನ ಮಾಡಿಕೊಂಡನು (ಪರಮಗೀತ 12:13, 14). ಜನರು ಕ್ರಿಸ್ತನನು ಹಿಂಬಾಲಿಸುವದರ ಮುಖಾಂತರ ಜೀವನವನ್ನು ಕಂಡುಕೊಳ್ಳಬಹುದು. ಈ ಮಾರ್ಗವು ತನ್ನನ್ನು ತಾನೇ ನಿರಾಕರಿಸಿ ಮತ್ತು ತ್ಯಾಗ ಮಾಡುವ ಮಾರ್ಗವಾಗಿದೆ, ಮತ್ತು ಇದು ಮಾತ್ರವೇ ನಿಜವಾಗಿಯೂ ತೃಪ್ತಿಕೊಡುವ ಮಾರ್ಗವಾಗಿದೆ.

David Stewart

---

ಟಿಪ್ಪಣೆಗಳು

[1]Talmud *Berakoth* 58b. [2]Douglas R. A. Hare, *Matthew,* Interpretation (Louisville: John Knox Press, 1993), 115. [3]ನೋಡಿರಿ David E. Aune, "Beelzebul," in *The International Standard Bible Encyclopedia,* rev. ed., ed. Geoffrey W. Bromiley (Grand Rapids, Mich.: Wm. B. Eerdmans Publishing Co., 1979), 1:447–48; and Theodore J. Lewis, "Beelzebul," in *The Anchor Bible Dictionary,* ed. David Noel Freedman (New York: Doubleday, 1992), 1:638–70. [4]Talmud *Shabbath* 35b. [5]Walter Bauer, *A Greek-English Lexicon of the New Testament and Other Early Christian Literature,* 3d ed., rev. and ed. Frederick W. Danker (Chicago: University of Chicago Press, 2000), 1098–1100. [6]R. T. France, *The Gospel According to Matthew,* The Tyndale New Testament Commentaries (Grand Rapids, Mich.: Wm. B. Eerdmans Publishing Co., 1985), 186. [7]Robert H. Mounce, *Matthew,* New International Biblical Commentary (Peabody, Mass.: Hendrickson Publishers, 1991), 97. [8]Bauer, 145. ಒಂದು ದಿನಾರೆ ಒಂದು ದಿವಸದ ಕೂಲಿಯಾಗಿತ್ತು (20:13). [9]David Menton, "The Amazing Human Hair," *Answers* (July/September 2007): 77. [10]Jerusalem Talmud *Shebiith* 9.1. "ಪರಲೋಕವಿಲ್ಲದ" ಎಂಬುದು ದೇವರ ಜ್ಞಾನಕ್ಕೆ ಅಥವಾ ದೇವರ ಸಾರ್ವಭೌಮಾಧಿಕಾರವನ್ನು ಸೂಚಿಸುತ್ತದೆ.

[11]Pliny *Letters* 10.96. [12]Plutarch *Moralia* 554B. [13]David Hill, *The Gospel of Matthew,* The New Century Bible Commentary (Grand Rapids, Mich.: Wm. B. Eerdmans Publishing Co., 1972), 195. [14]James Burton Coffman, *Commentary on Matthew* (Austin, Tex.: Firm Foundation Publishing House, 1977), 146. [15]Mishnah

*Berakoth* 5.5. [16]Jack P. Lewis, *The Gospel According to Matthew,* Part 1, The Living Word Commentary (Austin, Tex.: Sweet Publishing Co., 1976), 157; ನೋಡಿರಿ NEB. [17]William Hendriksen, *New Testament Commentary: Exposition of the Gospel According to Matthew* (Grand Rapids, Mich.: Baker Book House, 1973), 478; ನೋಡಿರಿ NIV. [18]ನೋಡಿರಿ William Byron Forbush, ed., *Fox's Book of Martyrs* (Philadelphia: Universal Book and Bible House, 1926), 2–5.